ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 140/2015**

**ಫ್ರಾಸಾ- 33 ಚಾಸಾ- 53**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಹೆಚ್ ಎಲ್ ಶಿವಬಸಪ್ಪ |
| ತಂದೆಯ ಹೆಸರುಃ | : | ಲಿಂಗಪ್ಪ |
| ವಯಸ್ಸುಃ | : | 72 ವರ್ಷ |
| ಉದ್ಯೋಗಃ | : | ನಿವೃತ್ತ ಡಿವೈ ಎಸ್ ಪಿ |
| ವಾಸ | : | ಮೈಸೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 04-09-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 2011 ರಿಂದ ಅಕ್ಟೋಬರ್ 2013ರವರೆಗೆ ಹಾಸನ ಲೋಕಾಯುಕ್ತ ಡಿವೈಎಸ್ ಪಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 25-7-13ರಂದು ಹಾಸನ ಲೋಕಾಯುಕ್ತ ಎಸ್ ಪಿ ರವರು ನನ್ನನ್ನು ಕಛೇರಿಗೆ ಕರೆಸಿಕೊಂಡು ಪಿಐ ನರಸಿಂಹಮೂರ್ತಿರವರು ಸಲ್ಲಿಸಿದ ಸೋರ್ಸ್ ವರದಿಯನ್ನು ನೀಡಿ ಒಂದು ಆದೇಶವನ್ನು ನೀಡಿದರು. ಆ ಆದೇಶದಲ್ಲಿ ಹಾಸನ ಚಾಮರಾಜೇಂದ್ರ ಸರ್ಕಾರಿ ಆಸ್ಪತ್ರೆಯ ಕಛೇರಿ ಅಧೀಕ್ಷಕರಾದ ಸಿ.ಆರ್. ಮಂಜುನಾಥ್ ರವರ ವಿರುದ್ಧ ಪಿಸಿ ಕಾಯಿದೆ ಅನ್ವಯ ತನಿಖೆ ಕೈಗೊಳ್ಳಬೇಕೆಂದು ಆದೇಶ ಮಾಡಿರುತ್ತಾರೆ. ಆ ಆದೇಶವನ್ನು ಈಗ ನೋಡುತ್ತಿದ್ದು ನಿಪಿ-160 ಎಂದು ಗುರುತಿಸಲಾಯಿತು. ನಂತರ ಠಾಣೆಗೆ ಬಂದು ಠಾಣಾ

ಮೊ.ಸಂ.53/13ರಂತೆ ಕೇಸು ದಾಖಲಿಸಿ ಪ್ರ.ವ.ವ.ಯನ್ನು ನಿಪಿ-161ರಂತೆ ಮುಚ್ಚಿದ ಲಕೋಟೆಯಲ್ಲಿ ಸೋರ್ಸ್ ವರದಿಯೊಂದಿಗೆ ನ್ಯಾಯಾಲಯಕ್ಕೂ ಪ್ರತಿಯನ್ನು ಮೇಲಧಿಕಾರಿಗಳಿಗೂ ಕಳುಹಿಸಿಕೊಟ್ಟೆನು. ನಿಪಿ-161ರಲ್ಲಿ ನನ್ನ ರುಜು ಇದ್ದು ನಿಪಿ-161(ಎ) ಎಂದು ಗುರುತಿಸಲಾಯಿತು. ಸೋರ್ಸ್ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-162 ಎಂದು ಗುರುತಿಸಲಾಯಿತು. ಶೋಧನಾ ಕಾರ್ಯಕ್ಕಾಗಿ ಅದೇ ದಿನ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಕಳುಹಿಸಿಕೊಡುವಂತೆ ಪೊಲೀಸ್ ಅಧೀಕ್ಷಕರಿಗೆ ಮನವಿ ಮಾಡಿಕೊಂಡಿರುತ್ತೇನೆ.

3.ನಂತರ ಅದೇ ದಿವಸ ಹಾಸನ ಲೋಕೋಪಯೋಗಿ ಇಲಾಖೆ ಮತ್ತು ಕೆಪಿಟಿಸಿಎಲ್ ಇಲಾಖೆಯ ಇಇರವರಿಗೆ ತನಿಖೆಗೆ ಪಂಚರನ್ನು ಕಳುಹಿಸಿಕೊಡುವಂತೆ ಮನವಿ ಸಲ್ಲಿಸಿದೆನು. ಅವುಗಳನ್ನು ಈಗ ನೋಡುತ್ತಿದ್ದು ನಿಪಿ-163 ಮತ್ತು 164 ಎಂದು ಗುರುತಿಸಲಾಯಿತು. ಅವುಗಳಲ್ಲಿ ನನ್ನ ರುಜುಗಳಿದ್ದು ನಿಪಿ-163(ಎ) ಮತ್ತು 164(ಎ) ಎಂದು ಗುರುತಿಸಲಾಯಿತು. ನಂತರ ನಾನು ಹಾಸನ ಜಿಲ್ಲೆಯ ಪ್ರಧಾನ ಮತ್ತು ಜಿಲ್ಲಾ ನ್ಯಾಯಾಲಯಕ್ಕೆ ಹೋಗಿ ಶೋಧನಾ ವಾರೆಂಟನ್ನು ನೀಡುವಂತೆ ಕೋರಿಕೆ ಸಲ್ಲಿಸಿದೆನು. ಅದೇ ದಿನಾಂಕದಂದು ನಿಪಿ-64, 156, 157ರಂತೆ ಶೋಧನಾ ವಾರೆಂಟನ್ನು ಪಡೆದುಕೊಂಡಿರುತ್ತೇನೆ. ನನ್ನ ಮನವಿಯ ಮೇರೆಗೆ ಚಿಕ್ಕಮಗಳೂರು ಲೋಕಾಯುಕ್ತ ಕಛೇರಿಯ ಪಿಐ ವಿನಯ್ ಮತ್ತು ಗುರುರಾಜ್ ರವರನ್ನು ಹಾಗೂ ಸಿಬ್ಬಂದಿಗಳನ್ನು ಕಳುಹಿಸಿಕೊಟ್ಟರು. ಲೋಕೋಪಯೋಗಿ ಇಲಾಖೆಯಿಂದ ವೈ ಎಸ್ ಸತ್ಯನಾರಾಯಣರಾವ್ ಮತ್ತು ಶಿವಪ್ರಕಾಶ್ ರವರನ್ನು, ಹಾಗೂ ಕೆಪಿಟಿಸಿಎಲ್ ವಿಭಾಗದ ಗೌರಿಶಂಕರ್ ಮತ್ತು ಚಂದ್ರಮ್ಮರವರನ್ನು ಪಂಚರಾಗಿ ಕಳುಹಿಸಿಕೊಟ್ಟಿರುತ್ತಾರೆ. ಇನ್ಸ್ಪೆಕ್ಟರ್ ಕೆ ಟಿ ಗುರುರಾಜ್ ರವರಿಗೆ ಗೌರಿಶಂಕರ್ ಮತ್ತು ಚಂದ್ರಮ್ಮರವರನ್ನು ಮತ್ತು ಚಿಕ್ಕಮಗಳೂರು ಲೋ.ಪೊ.ಸಿಬ್ಬಂದಿಗಳಾದ ಓಂಕಾರಪ್ಪ ಬಸವರಾಜು ಮತ್ತು ಉಮೇಶ್ ರವರನ್ನು, ಪಿಐ ವಿನಯ್ ರವರಿಗೆ ಸತ್ಯನಾರಾಯಣರಾವ್ ಮತ್ತು ಶಿವಪ್ರಕಾಶ್ ರವರನ್ನು ಮತ್ತು

ಚಿಕ್ಕಮಗಳೂರು ಲೋ.ಪೋ.ಸಿಬ್ಬಂದಿಗಳಾದ ಮಹೇಶ್ ಮತ್ತು ಅಶೋಕ್ ರವರನ್ನು ನೇಮಿಸಿ ಸೂಕ್ತ ತಿಳುವಳಿಕೆ ನೀಡಿ 26ನೇ ತಾರೀಖಿನ ಮುಂಜಾನೆ 5ಗಂಟೆಗೆ ಮತ್ತೆ ಬರುವಂತೆ ತಿಳಿಸಿ ಕಳುಹಿಸಿಕೊಟ್ಟೆನು.

4.ದಿನಾಂಕ 26-7-2013ರಂದು ಬೆಳಿಗ್ಗೆ 5 ಗಂಟೆಗೆ ನನ್ನ ಕಛೇರಿಯಲ್ಲಿ ಪಿಐ ವಿನಯ ಮತ್ತು ಗುರುರಾಜ್ ರವರು ಮತ್ತುಅವರಿಗೆ ನೇಮಿಸಿದ ಸಿಬ್ಬಂದಿಗಳು ಮತ್ತು ಪಂಚರು ಹಾಜರಾದ ಮೇರೆಗೆ ಅವರಿಗೆ ಮತ್ತೊಮ್ಮೆ ವಿಚಾರ ತಿಳಿಸಿ ಇಬ್ಬರೂ ಪಿಐ ಗಳಿಗೆ ಶೋಧನಾ ವಾರೆಂಟನ್ನು ಮುಚ್ಚಿದ ಲಕೋಟೆಯಲ್ಲಿ ಕೊಟ್ಟೆನು. ಗುರುರಾಜ್ ರವರಿಗೆ 2 ಶೋಧನಾ ವಾರೆಂಟನ್ನು ವಿನಯ್ ರವರಿಗೆ ಒಂದು ಶೋಧನಾ ವಾರೆಂಟನ್ನು ನೀಡಿ, ನಾನು ಹೇಳುವವರೆಗೆ ಸದರಿ ಲಕೋಟೆಯನ್ನು ತೆರೆಯದಂತೆ ಸೂಚನೆ ನೀಡಿರುತ್ತೇನೆ. ಸ್ವಲ್ಪ ಸಮಯದ ನಂತರ ಅವರಿಗೆ ಲಕೋಟೆ ತೆರೆಯುವಂತೆಯೂ, ಸದರಿ ಸ್ಥಳಕ್ಕೆ ಹೋಗಿ ಅದನ್ನು ಜಾರಿಗೊಳಿಸಿ ಶೋಧನೆ ನಡೆಸುವಂತೆ ಕಳುಹಿಸಿದೆನು. ಅದೇ ದಿನ ಮಧ್ಯಾಹ್ನ 13-30ಗಂಟೆಗೆ ಪಿಐ ವಿನಯ್ ರವರು ಕಛೇರಿಗೆ ಬಂದು ಮೂಲ ವಾರೆಂಟ್ ನೊಂದಿಗೆ ಶೋಧನಾ ಮಹಜರ್ ಕ್ರಮ ಜರುಗಿಸಿ ವರದಿ ಕೊಟ್ಟರು. ಅದನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡೆನು. ಸದರಿ ಶೋಧನಾ ಮಹಜರನ್ನು ಈಗ ನೋಡುತ್ತಿದ್ದು ಅದು ಈಗಾಗಲೇ ಗುರುತಿಸಲ್ಪಟ್ಟಿರುವ ನಿಪಿ-63 ಆಗಿರುತ್ತದೆ. ಸಂಜೆ 16-30 ಗಂಟೆಗೆ ಕೆ ಟಿ ಗುರುರಾಜ್ ಪಿ ಐ ರವರು ಅವರಿಗೆ ನೀಡಿದ್ದ ಮೂಲ ವಾರೆಂಟ್ ನೊಂದಿಗೆ ಶೋಧನಾ ಮಹಜರ್ ಮತ್ತು ಶೋಧನಾ ಕಾರ್ಯದಲ್ಲಿ ವಶಪಡಿಸಿಕೊಂಡ ವಸ್ತುಗಳೊಂದಿಗೆ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ಆ ಬಗ್ಗೆ ಅವರು ಸಲ್ಲಿಸಿರುವ 2 ಪತ್ರಗಳನ್ನು ಈಗ ನೋಡುತ್ತಿದ್ದು 165 ಮತ್ತು 166 ಎಂದು ಗುರುತಿಸಲಾಯಿತು. ಅದನ್ನು ಸ್ವೀಕರಿಸಿದ ಬಗ್ಗೆ ನನ್ನ ರುಜುಗಳಿದ್ದು ಅವುಗಳನ್ನು ನಿಪಿ-165(ಎ) ಮತ್ತು ನಿಪಿ-166(ಎ) ಎಂದು ಗುರುತಿಸಲಾಯಿತು. ಸದರಿ ಮಹಜರುಗಳನ್ನು

ನೋಡುತ್ತಿದ್ದು ಅದು ಈಗಾಗಲೇ ಗುರುತಿಸಲ್ಪಟ್ಟಿರುವ ನಿಪಿ-1 ಮತ್ತು 62 ಆಗಿರುತ್ತದೆ. ಅವರು ಹಾಜರುಪಡಿಸಿದ ಎಲ್ಲಾ 60 ವಸ್ತುಗಳನ್ನು ಮಾಲುಪಟ್ಟಿ ಸಂಖ್ಯೆ 29/13ರಲ್ಲಿ ನೊಂದಾಯಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

5.ದಿನಾಂಕ 27-7-13ರಂದು ತನಿಖೆ ಮುಂದುವರೆಸಿ ನಿಪಿ-1, 62, 63 ಹಾಗೂ ನಿಪಿ-64, 165, 157ನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆನು.

6.ದಿನಾಂಕ 2-8-13ರಂದು ತನಿಖೆ ಮುಂದುವರೆಸಿ ಆರೋಪಿತರ ಹೆಸರಿನಲ್ಲಿರುವ ಕುವೆಂಪುನಗರದಲ್ಲಿರುವ ಮನೆ ಮತ್ತು ಅವರ ಹೆಂಡತಿಯವರ ಹೆಸರಿನಲ್ಲಿರುವ ಕೆಹೆಚ್ ಬಿ ಕಾಲೋನಿಯಲ್ಲಿ ಕಟ್ಟುತ್ತಿರುವ ಮನೆಯ ಮೌಲ್ಯಮಾಪನ ಮಾಡಿ ವರದಿ ಕೊಡಲು ಎಸ್ ಪಿ ರವರಿಗೆ ಮನವಿ ಸಲ್ಲಿಸಿದೆನು.

7.ದಿನಾಂಕ 6-8-13ರಂದು ಆರೋಪಿಗೆ ಸಂಬಂಧಪಟ್ಟ ಅವರ ಸೇವಾ ವಿವರ ಅವರು ಸರ್ಕಾರದಿಂದ ಪಡೆದ ಸಂಬಳದ ವಿವರ ಮತ್ತು ಭತ್ಯೆಗಳು ಸರ್ಕಾರಕ್ಕೆ ಸಲ್ಲಿಸಿರುವ ಆಸ್ತಿದಾಯತ್ವ ವಿವರ ಮತ್ತು ಅವರು ತಮ್ಮ ಹಾಗೂ ತಮ್ಮ ಪತ್ನಿ ಹೆಸರಿನಲ್ಲಿ ಚರ ಹಾಗೂ ಸ್ಥಿರಾಸ್ತಿಗಳನ್ನು ಕೊಳ್ಳಲು ಪಡೆದ ಅನುಮತಿ ಪತ್ರ ಇವುಗಳನ್ನು ಸಕ್ಷಮ ಪ್ರಾಧಿಕಾರದಿಂದ ತರಿಸಿಕೊಡುವಂತೆ ಪೊಲೀಸ್ ಅಧೀಕ್ಷಕರಿಗೆ ಮನವಿ ಸಲ್ಲಿಸಿರುತ್ತೇನೆ. ಆರೋಪಿತರಿಗೆ ದಾಳಿ ಪ್ರಕರಣದಲ್ಲಿ ತನಿಖೆಗೆ ಅಗತ್ಯವಾದ ಮಾಹಿತಿಗಳನ್ನು ಅನುಬಂಧ 17 ರಿಂದ 23ರ ಪ್ರಪತ್ರದಲ್ಲಿ ಸಲ್ಲಿಸುವಂತೆ ಪತ್ರ ಕಳುಹಿಸಿರುತ್ತೇನೆ.

8.ದಿನಾಂಕ 20-8-13ರಂದು ತನಿಖೆ ಮುಂದುವರೆಸಿ, ಕೆಎ-20-ಎಲ್-3612ರ

ಹೋಂಡಾ ಆಕ್ಟಿವಾ ಮೋಟಾರ್ ಸೈಕಲ್ ಕೆಎ-13-ಡಬ್ಲ್ಯೂ -5674ರ ಮತ್ತು ಕೆಎ-13-ಎನ್-2780ರ ವಾಹನದ ಬಿ ಎಕ್ಸ್ಟ್ರಾಕ್ಟನ್ನು ಕೊಡುವಂತೆ ಆರ್ ಟಿ ಒ ರವರಿಗೆ ಪತ್ರ ಬರೆದಿರುತ್ತೇನೆ. ಕೆನರಾ ಬ್ಯಾಂಕ್, ಕಾರ್ಪೊರೇಷನ್ ಬ್ಯಾಂಕ್, ಎಸ್ ಬಿ ಐ ನಲ್ಲಿರುವ ಆರೋಪಿತರ ಹೆಸರಿನಲ್ಲಿರುವ ಖಾತೆ ಮತ್ತು ಇತರ ಮಾಹಿತಿಗಳನ್ನು ನೀಡುವಂತೆ ಸದರಿ ಬ್ಯಾಂಕ್ ಮ್ಯಾನೇಜರುಗಳಿಗೆ ಪತ್ರ ಬರೆದಿರುತ್ತೇನೆ. ಆಸ್ತಿ ಸಂಖ್ಯೆ 84, ಮನೆ ನಂಬರ್ 214, ಮನೆ ಸಂಖ್ಯೆ 3/ಬಿ ಮತ್ತು ಪತ್ನಿ ಹೆಸರಿನಲ್ಲಿರುವ ಚನ್ನಪಟ್ಟಣದ ನಿವೇಶನ ಇವುಗಳನ್ನು ಕ್ರಯಕ್ಕೆ ಕೊಂಡಾಗ ಕಟ್ಟಿದ ಮುದ್ರಾಂಕ ಶುಲ್ಕ ಹಾಗೂ ನೋಂದಣಿ ಶುಲ್ಕದ ವಿವರಗಳನ್ನು ನೀಡುವಂತೆ ಹಿರಿಯ ನೋಂದಂಣಾಧಿಕಾರಿಗಳಿಗೆ ಪತ್ರ ಬರೆದಿರುತ್ತೇನೆ.

9. ದಿನಾಂಕ 22-8-13ರಂದು ಹಿರಿಯ ಉಪನೋಂದಣಾಧಿಕಾರಿಗಳಿಂದ ಆರೋಪಿಗೆ ಸಂಬಂಧಿಸಿದ ಮುದ್ರಾಂಕ ಮತ್ತು ನೋಂದಣಿ ಶುಲ್ಕದ ವಿವರವನ್ನು ನಿಪಿ-166ರಂತೆ ಸ್ವೀಕರಿಸಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-166(ಬಿ) ಎಂದು ಗುರುತಿಸಲಾಯಿತು.

10. ದಿನಾಂಕ 27-8-13ರಂದು ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಇವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಬರೆದ ಪತ್ರದ ಪ್ರತಿಯನ್ನು ಕಳುಹಿಸಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿರುತ್ತೇನೆ.

11. ದಿನಾಂಕ 28-8-2013ರಂದು ಆರೋಪಿತರ ಸಂಬಂಧ ಆಸ್ತಿಯ ಮೌಲ್ಯಮಾಪನಕ್ಕಾಗಿ ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಇವರು ಮುಖ್ಯಅಭಿಯಂತರರು ತಾಂತ್ರಿಕ ವಿಭಾಗ ಲೊಕಾಯುಕ್ತ ಬೆಂಗಳೂರು ಇವರಿಗಬೆ ಬರೆದ ಪತ್ರದ ಪ್ರತಿಯನ್ನು ಕಳುಹಿಸಿದ್ದು ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿರುತ್ತೇನೆ.

12.ದಿನಾಂಕ 7-9-2013ರಂದು ಎಸ್.ಬಿ.ಐ ಚನ್ನರಾಯಪಟ್ಟಣ ಇವರು ಆರೋಪಿತರ ಬ್ಯಾಂಕ್ ಖಾತೆಯ ಸರಿಯಾದ ನಂಬರನ್ನು ನೀಡುವಂತೆ ಕೋರಿಕೊಂಡಿದ್ದರು, ಅದಕ್ಕೆ ನಾನು ಸರಿಯಾದ ನಂಬರು ಬರೆದು ಕಳುಹಿಸಿರುತ್ತೇನೆ. ದಿನಾಂಕ 19-9-13ರಂದು ಸದರಿ ಬ್ಯಾಂಕ್ ಶಾಖೆಯಿಂದ ಪತ್ರ ಬಂದಿದ್ದು ಸದರಿ ಪತ್ರದಲ್ಲಿ ಆರೋಪಿಯ ಖಾತೆಯು ಹಾಸನದ ಶಾಖೆಗೆ ವರ್ಗಾವಣೆಯಾಗಿರುವುದಾಗಿ ತಿಳಿಸಿರುತ್ತಾರೆ. ಆದ ಕಾರಣ ಮತ್ತೆ ಹಾಸನ ಎಸ್ ಬಿ ಐ ಶಾಖೆಗೆ ಪತ್ರ ಬರೆದು ಆರೋಪಿಯ ಖಾತೆಯ ವಿವರ ನೀಡುವಂತೆ ಕೇಳಿಕೊಂಡಿರುತ್ತೇನೆ.

13.ದಿನಾಂಕ 31-10-13ರಂದು ನನಗೆವಯೋನಿವೃತ್ತಿಯಾಗಿದ್ದರಿಂದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-54ರವರಿಗೆ ವಹಿಸಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಸಿ ಎನ್ ವಿ ವಕೀಲರಿಂದಃ**

(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**